ದೊಡ್ಡ, ಮಧ್ಯಮ ಹಾಗೂ ಚಿಕ್ಕ ನೀರಾವರಿ ಯೋಜನೆಗಳು, ವನ ನಿರ್ಮಾಣ, ಮಣ್ಣು ಸಂರಕ್ಷಣೆ, ಒಣ ಬೇಸಾಯ ಅಭಿವೃದ್ಧಿ, ಬರ ಪೀಡಿತ ಪ್ರದೇಶಗಳ ಅಭಿವೃದ್ಧಿ, ಮುಂತಾದ ಯೋಜನೆಗಳ ಮುಖಾಂತರ ಖಾಯಂ ಪರಿಹಾರ ಒದಗಿಸಲು ಸರ್ಕಾರವು ಯೋಜನೆಗಳನ್ನು ರೂಪಿಸಿ ಕೊಂಡಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳು ನಮಗೆ ಇನ್ನೂ ಬಂದಿಲ್ಲ. ಆ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು —ಈಗ ಕೆಲವು ಬಂದಿವೆ, ಅವನ್ನು ತೆಗೆದುಕೊಳ್ಳಿ. ಉಳಿದೆಲ್ಲವನ್ನು ಕೊಡಿಸುತ್ತೇನೆ. ಈಗ ವರದಿಯನ್ನೊಪ್ಪಿಸುವುದು. ಮಾನ್ಯ ಲಕ್ಷ್ಮೀನರಸಿಂಹಯ್ಯನವರ ಪರವಾಗಿ ಯಾರಾದರೂ ವರದಿಯನ್ನೊಪ್ಪಿಸುತ್ತೀರಾ?

(ಯಾರೂ ಒಪ್ಪಿಸಲಿಲ್ಲ)

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ನಾನು ನನ್ನ ಹೆಸರಿನಲ್ಲಿರುವ ಈ ಕೆಳಕಂಡ ಅರ್ಜಿಗಳನ್ನು ಒಪ್ಪಿಸಬಯಸುತ್ತೇನೆ,

" ಅ) ಕೋಲಾರ ಜಿಲ್ಲೆ. ಮುಳಬಾಗಿಲು ತಾಲ್ಲೂಕಿನ, ಅವನಿ ಹೋಬಳಿ ಕೆಂಪಾಪುರ ಗ್ರಾಮದ ಹರಿಜನ ಕೇರಿಗೆ ವಿದ್ಯುತ್ ಪೂರೈಕೆ ಬಗ್ಗೆ

ಆ) ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕಿನ ತಾಯಿಲೂರು ಹೋಬಳಿ ಪುಟ್ಟೇನಹಳ್ಳಿ–ಕುರುಬರಪಳ್ಳಿ ರಸ್ತೆಯನ್ನು ದುರಸ್ತಿಪಾಡಿ ಪುಟ್ಟೇನಹಳ್ಳಿ ಹತ್ತಿರ ಮೋರಿಯನ್ನು ನಿರ್ಮಿಸುವ ಬಗ್ಗೆ

ಇ) ಕೋಲಾರ ತಾಲ್ಲೂಕಿನ ವೇಮಗಲ್ ಹೋಬಳಿ ಕಾಡಹಳ್ಳಿ ಗ್ರಾಮಸ್ಥರು ಬಾವಿಗಳನ್ನು ತೋಡಿಸಲು ಪಡೆದ ಸಾಲದ ಮೊತ್ತವನ್ನು ಸರ್ಕಾರವು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಹಾಗೂ ಸಹಕಾರ ಸಂಘಗಳಿಗೆ ನೀಡುವ ಬಗ್ಗೆ "

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಇಂಡಸ್ಟ್ರೀಸ್ ಮಂತ್ರಿಗಳು ಮತ್ತು ಸಿರಿಕಲ್ಚರ್ ಮಂತ್ರಿಗಳು ಇಲ್ಲದಿರುವುದರಿಂದ ರೇವಿನ್ಯೂ ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಬಹುದು. ಮಾನ್ಯ ಕೃಷ್ಣನ್ ಮತ್ತು ಮಾನ್ಯ ವೆಂಕಟರಾಮಯ್ಯನವರ ಗಮನ ಸೆಳೆಯುವ ಸೂಚನೆಯನ್ನು ಆ ವೇಳೆ ತೆಗೆದುಕೊಳ್ಳಿ. ಇಬ್ಬರು ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ.

ಗಮನ ಸೆಳೆಯುವ ಸೂಚನೆ

ಬಗರ್ ಹುಕುಂನಲ್ಲಿ ಮುಳುಗಡೆದಾರರು ಮತ್ತು ಭೂ ರಹಿತ ಕೂಲಿಗಾರರಿಗೆ ಸಾಗುವಳಿ ಹಕ್ಕನ್ನು ನೀಡದಿರುವುದು

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಸ್ವಾಮಿ, ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಭೂಹೀನರು, ಮುಳುಗಡೆದಾರರು ಹಾಗೂ ಭೂ ರಹಿತ ಕೂಲಿಗಾರರಿಗೆ ಸಾಗುವಳಿ ಹಕ್ಕನ್ನು ನೀಡದೆ ಇರುವುದರಿಂದ ಉಂಟಾಗಿರುವ ಬಗ್ಗೆ ಮಾನ್ಯ ಕಂದಾಯ, ಯೋಜನೆ ಮತ್ತು ಕಾರ್ಮಿಕ ಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—(ಕಂದಾಯ, ಯೋಜನೆ ಮತ್ತು ಕಾರ್ಮಿಕ ಮಂತ್ರಿಗಳು).—ಅಧ್ಯಕ್ಷರೆ, ನಾನು ಈ ಕೆಳಗಿನ ಹೇಳಿಕೆಯನ್ನು ಮಾಡಬಯಸುತ್ತೇನೆ. ಸರ್ಕಾರಿ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿರುವಂತಹ ಹರಿಜನ–ಗಿರಿಜನ, ಭೂರಹಿತರು, ಭೂ ಕಾರ್ಮಿಕರು, ಸಣ್ಣ ರೈತರುಗಳಿಗೆ ಅವರು ಆಕ್ರಮಿಸಿರುವ ಜಮೀನಿನಲ್ಲಿ ಕಾನೂನು ರೀತ್ಯ ಸಕ್ರಮಗೊಳಿಸುವ ಸಲುವಾಗಿ ಸರ್ಕಾರದಿಂದ ಅವಶ್ಯ ಕ್ರಮ ಕೈಕೊಳ್ಳಲಾಗಿದೆ. ಅವುಗಳಲ್ಲಿ ಸರ್ಕಾರದ ಆದೇಶದ ಸಂಖ್ಯೆ ಆರ್‌ಡಿ ೧೦೫ ಎಲ್‌ಜೆಪಿ ೭೭ ದಿನಾಂಕ ೧–೯–೭೭ ರ ಪ್ರಕಾರ ಜಮೀನನ್ನು ೧–೯–೭೭ ಕ್ಕಿಂತ ಮೂರು ವರ್ಷಕ್ಕೆ ಮುಂಚಿತವಾಗಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದ ಅರ್ಹ ಜನರಿಗೆಲ್ಲರಿಗೂ ಸಕ್ರಮ ಬಗ್ಗೆ ಅರ್ಜಿ ಹಾಕಿಕೊಳ್ಳಲು ೧೫–೧೧–೮೭ ರ ವರೆವಿಗೂ ಕಾಲ ನಿಗದಿ ಪಡಿಸಲಾಗಿತ್ತು ಮತ್ತು ಅರ್ಹರಾದ ಬಹುಕೇತ ಎಲ್ಲರಿಗೂ ಮೇಲ್ಕಂಡ ಆದೇಶದ ಪ್ರಕಾರ ಸಕ್ರಮಗೊಳಿಸಲಾಗಿದೆ.